ತಾರೀಖು 24ನೆ ಜೂ 1904.

ನಂ. ಸಿ. 5, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ಜೆ. ಕುಮಾರಸ್ವಾಮಿ ನಾಯಿಕ್, ಬಿ. ಎ., ಯವರಿಗೆ 1904ನೆ ಮೇ 30ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನವರೆಗ್ಯೂ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೆ ಜೂ 1904.

ನಂ. ರೆ. 4103, ಸ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಹೊನ್ನಾಳಿಯಲ್ಲಿ ಮುನಸ್ಸೀನರ ಖಚರ್ ಸ್ಥಾನವನ್ನು ವಿಸ್ತರಿಸತಕ್ಕ ಬಗ್ಗೆ ಬೇಕಾಗಿರುತ್ತದೆ. ಮತ್ತು ಇವೊಗ್ಗ ಡಿಸ್ಟ್ರಿಕ್ಟಿನ ಎರಡನೇ ಅಸಿಸ್ಟೆಂಟ್ ಕಮಿಷನರು ಮೇಲ್ಕಂಡ ರೆಗ್ಯುಲೇಷನಿನ 3 (c) ಮ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಜಡಿಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂ.	ವಿವರ.	ಜೇಕಾಗಿರುವ ವಿಸ್ತೀರ್ಣ.	ಆಕಾರ.	ಚಕ್ಕುಬಂದಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ	ಹೊನ್ನಾಳಿ	ಹೊನ್ನಾಳಿ	ಅಂಜನಾಪುರ	ಭೀಮ	ಸರ್ವೆ ನಂ. 1ರ ಭಾಗ	ಖುಸ್ಕಿ	5 ಎಕರೆ, 24 ಗುಂಟೆ	ರೂ. 4—4—1	ಸರ್ವೆ ನಂ. 1ರ ಭಾಗ	ಸರ್ವೆ ನಂ. 4.	ಸರ್ವೆ ನಂ. 3ರಲ್ಲಿರುವ ಕಾಲುಹಾದಿ	ಸರ್ವೆ ನಂ. 1ರ ಭಾಗ

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಮ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಅಫಿಷಿಯೇಟಿಂಗ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.

ಮಿಸ್ಸಿಲ್ಲೇನಿಯಸ್.

ತಾರೀಖು 28ನೆ ಜೂ 1904.

ನಂ. 674—3692, ಸ 1904ನೆ ಜೂ 18ನೆ ತಾರೀಖು ಇಂಡಿಯಾ ಗೆಜೆಟ್ಟಿನ ಇದರಡೀ ಕಂಡ ಎಕ್ಸ್ಟ್ರಾಕ್ಟು ತಿಳುವಳಿಕೆ ಬಗ್ಗೆ ಮರಳಿ ಪ್ರಕಟಿಸಲ್ಪಡಲ್ಪಟ್ಟಿರುತ್ತೆ :—

ಪಬ್ಲಿಕ್ ವರ್ಕ್ಸ್ ಇಲಾಖೆ.

ರೈಲ್ವೆಗಳು.

ಮಿಸ್ಸಿಲ್ಲೇನಿಯಸ್.

ತಾರೀಖು 13ನೆ ಜೂ 1904, ಸಿಂಲಾ.

ನಂ. 215, ಸ್ಟೇಟು ರೈಲ್ವೆಗಳಿಗೆ ಸೇರಿದ ಚೀಫ್ ಇನ್ಸ್‌ಪೆರ್ಟಿಂಡ್ಡಿಂಗ್ ಇಂಜನಿಯರುಗಳ ಇದರಡೀ ಕಂಡ ಬಡ್ತಿಗಳು ಮ ವಾಪಸು ಬರೋಣವು ನಮೂದು ಮಾಡಲ್ಪಟ್ಟ ತಾರೀಖುಗಳಾರಭ್ಯ ವೈಸ್‌ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಯವರು ಹುಕುಂ ಮಾಡಿರುತ್ತಾರೆ : —

ಹೆಸರುಗಳು.	ಎಲ್ಲಿಂದ.	ಎಲ್ಲಿಗೆ.	ಬಡ್ತಿಯ ಸ್ವಭಾವ.	ಯಾವ ಲಾಗಾಯ್ತು.
ಡಬ್ಲ್ಯೂ. ಮೆಕ್‌ಹಚೀಯವರು	ಮೊದಲನೇ ಕ್ಲಾಸಿನ ಸೂಪರ್‌ಟೆಂಡಿಂಗ್ ಇಂಜನಿಯರ್, ಹಂಗಾಮಿ ದರ್ಜೆ ಸೂಪರ್‌ನ್ಯೂಮೆರರಿ	ಮೊದಲನೇ ಕ್ಲಾಸಿನ ಸೂಪರ್‌ಟೆಂಡಿಂಗ್ ಇಂಜನಿಯರ್, ಸೂಪರ್‌ನ್ಯೂಮೆರರಿ	ಸಬ್ ಪ್ರೊಟೆಂ	1904ನೇ ಮೇ 14

(ಸೈನ್ಡ್) ಸಿ. ಡಬ್ಲ್ಯೂ. ಹಾರ್ಪರ್,
ಇಂಡಿಯಾ ಗವರ್ನ್‌ಮೆಂಟಿನ ಅಫಿಷಿಯೇಟಿಂಗ್ ಸೆಕ್ರಿಟೆರಿ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹಚೀಸ್,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಸೆಕ್ರಿಟೆರಿ.